<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ.</u>

***<u>ಸಿ.ಸಿ. ನಂ.641/2024</u>***

***<u>ಪಿರ್ಯಾಧಿದಾರರುಃ</u>*** M/S ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ ಲಿಮಿಟೆಡ್, ಶ್ರೀ ಟವರ್ಸ್, 14ಎ, ಸೌತ್ ಫೇಸ್, ಇಂಡಸ್ಟ್ರಿಯಲ್ ಎಸ್ಟೇಟ್, ಗೈಂಡಿ, ಚೆನ್ನೈ -600032, ಇದರ ನೋಂದಾಯಿತ ಕಚೇರಿ ಕಮಂಡಲ ಗಣಪತಿ ವಾಣಿಜ್ಯ ಸಂಕೀರ್ಣ, ಎಸ್.ವಿ.ಟಿ. ರಸ್ತೆ, ಪೊಲೀಸ್ ಠಾಣೆಯ ಹಿಂದೆ, ಕೊಪ್ಪ -577126, ಇದರ ಪರವಾಗಿ ಎಸ್.ಪಿ.ಎ. ಹೋಲ್ಡರ್ ಶ್ರೀ ಕಾಂತರಾಜು ಬಿನ್ ರಾಮೇಗೌಡ, ವಯಸ್ಸು 26 ವರ್ಷ,ವಾಸ ಚಿಕ್ಕಮಗಳೂರು.

**ವಿರುದ್ಧ**

***<u>ಆರೋಪಿಃ</u>*** ಅಭಿಲಾಷ್ ಎ.ಎಸ್. ಬಿನ್ ಸದಾನಂದ, ವಯಸ್ಕರು, ವಾಸ ಅಬ್ಬಿಗುಂಡಿ, ಹಿರೆಕೊಡಿಗೆ ಶಾಲೆಯ ಹತ್ತಿರ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಪೋನ್ ನಂ.9449372603.

- -

**<u>ಆಪಾದನೆ</u>**

ಆರೋಪಿಯಾದ ನೀವು Bull HD 76 2WD BS 4 ನೋಂದಣಿ ಸಂಖ್ಯೆ ಕೆಎ-18/ಜಡ್-6771 ನಂಬರಿನ ವಾಹನವನ್ನು ಖರೀದಿಸುವ ಸಲುವಾಗಿ ಪಿರ್ಯಾದಿದಾರರ ಕಂಪನಿಯಿಂದ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲದ ಬಾಬ್ತು ರೂ.2,44,365/- ತೀರುವಳಿ ಮಾಡುವ ಸಲುವಾಗಿ 535449ರ ಸಂಖ್ಯೆಯುಳ್ಳ 07.05.2024 ದಿನಾಂಕವನ್ನು ನಮೂದಿಸಿದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕೊಪ್ಪ ಶಾಖೆಯ ಒಂದು ಚೆಕ್ಕುನ್ನು ಅವರಿಗೆ ನೀಡಿದ್ದು, ಸದರಿ ಚೆಕ್ಕುನ್ನು ಪಿರ್ಯಾಧಿದಾರರು ಆ್ಯಕ್ಸಿಸ್ ಬ್ಯಾಂಕ್ ಲಿಮಿಟೆಡ್, ಕೊಪ್ಪ ಶಾಖೆಗೆ ಹಾಜರುಪಸಿದಾಗ ನಿಮ್ಮ ಖಾತೆಯಲ್ಲಿ **"ಸಾಕಷ್ಟು ಹಣ ಇಲ್ಲ**'' ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 23.05.2024 ರಂತೆ ವಕೀಲರ ನೋಟೀಸು ನೀಡಿದ್ದು ಸದರಿ ನೋಟೀಸು ನಿಮಗೆ ದಿನಾಂಕ 31.05.2024 ರಂದು ಜಾರಿಯಾಗಿದಾಗ್ಯೂ ಸಹ ನೀವು ಸದರಿ ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ-	ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ	ತಿಳಿಯಿತು

ಪ್ರಶ್ನೆ 2ಃ-	ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ	ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ಸಹಿ/- 09.10.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.